# ಆಹಾ ಸುದ್ದಿ!

★ ಸಸಿತೋಟ



ಅಮೆರಿಕದ ಮೀನಿನ ಫಾರ್ಮ್‌ನಲ್ಲಿರುವ ಸ್ಟರ್‌ಜಿಯಾನ್ ಮೀನುಗಳಿವು. ನೈಸರ್ಗಿಕವಾಗಿ ಬೆಳೆದರೆ ಅಪ್ಪ- ಅಮ್ಮಂದಿರಾಗಲು 15- 20 ವರ್ಷಗಳು ಬೇಕಂತೆ. ಆದರೆ ಅವುಗಳಿಗೆ ಪ್ರೊಟೀನ್ ಡಯಟ್ ಕೊಟ್ಟು 6-7 ವರ್ಷಗಳಿಗೆಲ್ಲಾ ಮಕ್ಕಳನ್ನಾಡಿಸುವಂತೆ ಮಾಡುತ್ತಿದ್ದಾರೆ ವಿಜ್ಞಾನಿಗಳು. ಯಾವುದಕ್ಕೂ ಕಾಯುವ ತಾಳ್ಮೆಯಿಲ್ಲ ಮನುಷ್ಯನಿಗೆ.

ಹಿಂದೆ ಇದೇ ಪುಟದಲ್ಲಿ ಎರಡು ಕಟ್ಟಡಗಳ ಮಧ್ಯೆ ಹಗ್ಗದ ಮೇಲೆ ಕ್ಯಾಟ್‌ವಾಕ್ ಮಾಡುವವನ ವಿವರ ಪ್ರಕಟವಾಗಿತ್ತು. ಈ ಚಿತ್ರದಲ್ಲಿರುವವ ಫ್ರಾನ್ಸ್‌ನ 'ಸ್ಪೈಡರ್‌ಮ್ಯಾನ್' ರಾಬರ್ಟ್. ಕಂಡಕಂಡ ಕಟ್ಟಡಗಳನ್ನು ಓತಿಕ್ಯಾತದಂತೆ ಚಕಚಕನೆ ಏರುತ್ತಾನೆ. ಅದೂ ಯಾವುದೇ ಸುರಕ್ಷತೆಯಿಲ್ಲದೇ. ಕೂಲಿಗಳು ಲಭ್ಯವಿಲ್ಲದ ಈ ಕಾಲದಲ್ಲಿ ಇಲ್ಲಿಗೆ ಬಂದಿದ್ದರೆ ತೆಂಗು, ಅಡಿಕೆ ಕೊಯ್ದುಕೊಂಡು ಕಾಸು ಕಲೆ ಹಾಕಬಹುದಿತ್ತು,



ಚೀನಾದಲ್ಲೀಗ 'ದಂಪತಿ ತೆರಿಗೆ ತುಂಬುವವರೆಗೆ ಬೇರೆ ಬೇರೆ' ಎಂಬ ಜೋಕ್ ಚಾಲ್ತಿಯಲ್ಲಿದೆ. ಕಳೆದ ವಾರ ಪ್ರತಿ ಐದು ನಿಮಿಷಕ್ಕೆ ಒಂದರಂತೆ ವಿಚ್ಛೇದನ ನಡೆಯಿತಂತೆ. ಮನೆ ಮಾರುವವರಿಗೆ ಅತಿ ಹೆಚ್ಚಿನ ಆಸ್ತಿ ತೆರಿಗೆ ವಿಧಿಸಿದ್ದೇ ಇದಕ್ಕೆ ಕಾರಣ. ಹೀಗಾಗಿ ಆಸ್ತಿಯನ್ನೇ ಇಬ್ಭಾಗ ಮಾಡಿದರೆ ಕರ ಉಳಿಸಬಹುದಲ್ಲ. ಅದಕ್ಕೇ ಕುಟುಂಬವೂ ಇಬ್ಭಾಗ. ಒಮ್ಮೆ ಮನೆ ಮಾರಾಟ ಮುಗಿದ ಮೇಲೆ ಮರುಮದುವೆಗೆ ಅರ್ಜಿ ಗುಜರಾಯಿಸುವವರ ಸಂಖ್ಯೆ ಎಷ್ಟಿರುತ್ತದೋ? ಬೇಡದ ಮದುವೆಗೆ ಇದು 'ಗುಡ್‌ಬೈ' ಹೇಳಲು ಸುಸಂದರ್ಭ.

ನಾರ್ವೆಯ ಶಿಕ್ಷಕಿಯೊಬ್ಬಳು ರಕ್ತ ಹೇಗಿರುತ್ತದೆಂದು ಕೆಜಿ ಕ್ಲಾಸ್ ಮಕ್ಕಳಿಗೆ ತೋರಿಸಲು ತನ್ನ ರಕ್ತವನ್ನೇ ತಂದು ತೋರಿಸಿದಳು. ಒಳ್ಳೆ ಕೆಲಸವೇ! ಆದರೆ ರಕ್ತದಲ್ಲಿ ಬೆರಳನ್ನು ಅದ್ದಿದ ಮಕ್ಕಳಿಗೆ ಒರೆಸಿಕೊಳ್ಳುವುದು ಹೇಗೆಂದು ತೋರಿಸಲು ಬೆರಳನ್ನು ಬಾಯಲ್ಲಿಟ್ಟು ಚೀಪುವುದೇ! ಪುಟ್ಟ ಮಕ್ಕಳು ಶಿಕ್ಷಕಿಯನ್ನು ಅನುಕರಿಸಿದರು. ಶಾಲೆಯಲ್ಲಿ ನಡೆದ ಶಿಕ್ಷಕಿಯ ಪ್ರಾಯೋಗಿಕ ರಕ್ತ ಪರೀಕ್ಷೆ, ಈಗ ಪ್ರಯೋಗಾಲಯದಲ್ಲೂ ನಡೆಯುತ್ತಿದೆ, ಎಚ್‌ಐವಿ, ಹೆಪ್ಯಾಟಿಟಿಸ್‌ಗಾಗಿ.



ಡಲ್ಲಾಸ್‌ನಲ್ಲಿ ಆರು ತಿಂಗಳ ಹಿಂದೆ ಕೊಬ್ಬಿದ ಬೆಕ್ಕೊಂದು ರಸ್ತೆಯಲ್ಲಿ ತಿರುಗುತ್ತಿತ್ತು. ಡಾ.ಬ್ರಿಟ್ನಿ ಎಂಬ ವೈದ್ಯೆ ಅದಕ್ಕೆ ಡಯಟ್, ವ್ಯಾಯಾಮ ಎಂದೆಲ್ಲಾ ಮಾಡಿಸಿ ಏಳು ಪೌಂಡ್ ತೂಕ ಇಳಿಯುವಂತೆ ಮಾಡಿದ್ದಾಳೆ. ಇದೀಗ ಅದು 'ಸಾಧನೆ'ಯ ಪಟ್ಟಿ ಸೇರಿಕೊಂಡಿದೆಯಂತೆ. ಇಂತಹ ಸಾಧನೆ ಮಾಡಲು ಬೆಕ್ಕು ಮಾತ್ರವಲ್ಲ, ನಾಯಿಗಳು, ಹಸುಗಳು, ಮಂಗಗಳು.. ಬೇಕಾದಷ್ಟಿವೆ ಬೆಂಗಳೂರಿನಲ್ಲಿ.




ಎಲ್ಲದಕ್ಕೂ ಒಂದು ದಿನ. ಹಾಗೇ ಉಕ್ಕಿನ ಖಡ್ಗ ನುಂಗುವವರಿಗೂ ಒಂದು ದಿನವಿದೆ. ಫೆ.23ರಂದು ಲಾಸ್ ಏಂಜಲೀಸ್‌ನಲ್ಲಿ ನಡೆದ 6ನೇ ಜಾಗತಿಕ ಖಡ್ಗ ನುಂಗುವವರ ದಿನಾಚರಣೆಯಲ್ಲಿ ನೂರಾರು ಮಂದಿ ಜಾಮೂನು ತರಹ ಖಡ್ಗಗಳನ್ನು ನುಂಗಿದರು. 25- 30 ಇಂಚು ಉದ್ದದ ಖಡ್ಗಗಳು. ಒಟ್ಟು 6 ಮೀಟರ್‌ಗಳಷ್ಟು ಉಕ್ಕು ಸಾಹಸಿಗರ ಹೊಟ್ಟೆ ಸೇರಿತಂತೆ. ಹೀಗೇ ಲೋಹಗಳನ್ನು ತಿಂದು ತೇಗುತ್ತಾ ಹೋದರೆ ಕಟ್ಟಡ ಕಟ್ಟುವವರ ಪಾಡೇನು?